# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1134 |
| ಸದಸ್ಯರು ಹೆಸರು | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21.08.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>2023-24ನೇ ಸಾಲಿನಿಂದ ಕೊಪ್ಪಳ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ಹಿಟ್ & ರನ್ ಪ್ರಕರಣಗಳು ದಾಖಲಾಗಿವೆ; ಅವುಗಳ ಪೈಕಿ ಎಷ್ಟು ಜನರಿಗೆ ಪರಿಹಾರ ಧನ ನೀಡಲಾಗಿದೆ; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)</td><td>
<table>
<tr><th>ವರ್ಷ</th><th>ಒಟ್ಟು ಸಂಭವಿಸಿದ ಹಿಟ್ & ರನ್ ಪ್ರಕರಣಗಳು</th></tr>
<tr><td>2023</td><td>22</td></tr>
<tr><td>2024</td><td>29</td></tr>
<tr><td>2025 (31.07.2025 ಅಂತ್ಯದವರೆಗೆ)</td><td>16</td></tr>
<tr><td>ಒಟ್ಟು</td><td>67</td></tr>
</table>
ಕೊಪ್ಪಳ ಜಿಲ್ಲೆಯಲ್ಲಿ 2025 ನೇ ಸಾಲಿನಲ್ಲಿ ಜುಲೈ ತಿಂಗಳಿನ ಅಂತ್ಯದವರೆಗೆ ಒಟ್ಟು 16 ಹಿಟ್ & ರನ್ ಪ್ರಕರಣಗಳು ತನಿಖೆಯಲ್ಲಿದ್ದು, ಪತ್ತೆ ಕಾರ್ಯಾ ಚರಣೆಯು ಪ್ರಗತಿಯಲ್ಲಿದ್ದು, ಪತ್ತೆಯಾದ ಪ್ರಕರಣಗಳಲ್ಲಿ ಅಂತಿಮ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತದೆ. ಪತ್ತೆಯಾಗದ ಪ್ರಕರಣಗಳಲ್ಲಿ "ಸಿ" ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ಪರಿಹಾರದ ಕುರಿತು ಸದರಿ ಪ್ರಕರಣಗಳಲ್ಲಿ ಗಾಯಾಳುಗಳಿಗೆ ಹಾಗೂ ಮೃತರ ಕುಟುಂಬದ ವಾರಸುದಾರರಿಗೆ ನಿಗಧಿತ ಅವಧಿಯೊಳಗೆ ಮಾನ್ಯ ಜಿಲ್ಲಾಧಿಕಾರಿಗಳಲ್ಲಿ "ಸೊಲೇಟಿಯಂ ಯೋಜನೆ" ಅಡಿಯಲ್ಲಿ ಪರಿಹಾರ ಪಡೆಯುವ ಕುರಿತು ಅರ್ಜಿಗಳನ್ನು ಸಲ್ಲಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗುತ್ತದೆ.</td></tr>
<tr><td>(ಆ)</td><td>ಹಿಟ್ & ರನ್ ಪ್ರಕರಣದಲ್ಲಿ ಸ್ವೀಕೃತವಾಗಿರುವ ಎಲ್ಲಾ ಅರ್ಜಿಗಳಲ್ಲಿ ಸಂಬಂಧಿಸಿದವರಿಗೆ ನಿಗಧಿತ ಅವಧಿಯೊಳಗಾಗಿ ಪರಿಹಾರ ಧನ ಪಾವತಿಸಲಾಗಿದೆಯೇ;(ವಿವರ ಒದಗಿಸುವುದು)</td><td>ಅನ್ವಯಿಸುವುದಿಲ್ಲ</td></tr>
<tr><td>(ಇ)</td><td>ಕೊಪ್ಪಳ ಜಿಲ್ಲೆಯಲ್ಲಿ ಹಿಟ್ & ರನ್ ಪ್ರಕರಣಗಳಲ್ಲಿ 2023-2024ನೇ ಸಾಲಿನಿಂದ ಇಲ್ಲಿಯವರೆಗೆ ವರ್ಷವಾರು ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ ನಿಗಧಿತ ಅವಧಿಯೊಳಗೆ ಪರಿಹಾರ ಧನ ಪಾವತಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು;</td><td>ಅನ್ವಯಿಸುವುದಿಲ್ಲ</td></tr>
</table>

| | | |
|---|---|---|
| (ಈ) | ನಿಗಧಿತ ಅವಧಿ ಮೀರಿ ಎಷ್ಟು ಪ್ರಕರಣಗಳಲ್ಲಿ ಎಷ್ಟು ದಿನಗಳ ವಿಳಂಬದ ನಂತರ ಪರಿಹಾರ ಧನ ಪಾವತಿಸಲಾಗಿದೆ; (ವರ್ಷಾವಾರು ವಿವರ ಒದಗಿಸುವುದು) | ಅನ್ವಯಿಸುವುದಿಲ್ಲ |
| (ಉ) | ಪ್ರಸ್ತುತ ಬಾಕಿ ಇರುವ ಅರ್ಜಿಗಳ ಸರಾಸರಿ ಎಷ್ಟು ದಿನಗಳಿಂದ ಬಾಕಿ ಇರುತ್ತದೆ; ಅವಧಿ ಮೀರಿ ಬಾಕಿ ಇರಲು ಕಾರಣವೇನು; (ವಿವರ ಒದಗಿಸುವುದು) | ಅನ್ವಯಿಸುವುದಿಲ್ಲ |
| (ಊ) | ಕೊಪ್ಪಳ ಜಿಲ್ಲೆಯಲ್ಲಿ ಹಿಟ್ & ರನ್ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯಿಂದ ಕಂದಾಯ ಇಲಾಖೆಗೆ ವರದಿ ಸಲ್ಲಿಸಲು ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ಒದಗಿಸುವುದು) | ಕೊಪ್ಪಳ ಜಿಲ್ಲೆಯಲ್ಲಿ ಹಿಟ್ & ರನ್ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯಿಂದ ಕಂದಾಯ ಇಲಾಖೆಗೆ ವರದಿ ಸಲ್ಲಿಸಲು ವಿಳಂಬ ಧೋರಣೆ ಅನುಸರಿಸುತ್ತಿಲ್ಲ. ಪ್ರಕರಣ ದಾಖಲಾದ ತಕ್ಷಣವೇ ಎಂ.ಎ.ಸಿ.ಟಿ ನ್ಯಾಯಾಲಯಕ್ಕೆ ಮಾಹಿತಿಯನ್ನು ನಿವೇದಿಸಿಕೊಳ್ಳಲಾಗುತ್ತಿದೆ. ನಂತರ ಹಿಟ್ & ರನ್ ಪ್ರಕರಣಗಳಲ್ಲಿ "ಸಿ" ರಿಪೋರ್ಟ್ ಅಂತಿಮ ವರದಿ ಸಲ್ಲಿಸಿದ ನಂತರ ಪರಿಹಾರ ಕುರಿತು ಸದರಿ ಪ್ರಕರಣಗಳಲ್ಲಿ ಗಾಯಾಳುಗಳಿಗೆ ಹಾಗೂ ಮೃತರ ಕುಟುಂಬದ ವಾರಸುದಾರರಿಗೆ ನಿಗಧಿತ ಅವಧಿಯೊಳಗೆ ಮಾನ್ಯ ಜಿಲ್ಲಾಧಿಕಾರಿಗಳಲ್ಲಿ "ಸೊಲೇಟಿಯಂ ಯೋಜನೆ" ಅಡಿಯಲ್ಲಿ ಪರಿಹಾರ ಕುರಿತು ಅರ್ಜಿ ಸಲ್ಲಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ. |

ಹೆಚ್‌ಡಿ 400 ಎಸ್‌ಎಸ್‌ಟಿ 2025

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು.